


'ಸಪ್ತ ಸಾಗರದಾಚೆ ಎಲ್ಲೋ' ಚಿತ್ರದ ಪೋಸ್ಟರ್

ಮತ್ತೆ ಲಾಕ್‌ಡೌನ್ ಭೀತಿ ಆವರಿಸಿದೆ. ಚಂದನವನದ ಬತ್ತಳಿಕೆಯ ಬ್ರಹ್ಮಾಸ್ತ್ರಗಳೆಲ್ಲ ನೆಲಕಚ್ಚಿವೆ. ಮುಂದೆ ಪ್ರಪಾತ ಬಾಯ್ತೆರೆದಿದೆ. ಕಾಲಡಿಯ ನೆಲ ಕುಸಿಯುತ್ತ ಅತ್ತಲೇ ಸೆಳೆದೊಯ್ಯುತ್ತಿದೆ. ಚಿತ್ರರಂಗದ ಕತ್ತಿಗೆ ಸುತ್ತಿಕೊಳ್ಳುತ್ತಿರುವ ಹತ್ತು ಹಲವು ಬಳ್ಳಿಗಳು ಉಸಿರುಗಟ್ಟಿಸುವಷ್ಟು ಬಿಗಿಯಾಗುತ್ತಿದೆ.

## ಅಸ್ಥಿರತೆಯ ಭಯ

'ಮತ್ತೆ ಏನಾದರೂ ಚಿತ್ರರಂಗ ಪೂರ್ತಿ ಸ್ಥಗಿತಗೊಂಡರೆ ಉದ್ಯಮದಲ್ಲಿ ಇರುವ ಅರ್ಧಕ್ಕರ್ಧ ಜನ ಚಿತ್ರರಂಗ ಬಿಟ್ಟು ಹೋಗುತ್ತಾರೆ' ಎಂದು ಆತಂಕದಿಂದಲೇ ಹೇಳುತ್ತಾರೆ ನಿರ್ದೇಶಕ ಜಯತೀರ್ಥ. 'ಒಲವೇ ಮಂದಾರ', 'ಟೋನಿ', 'ಬ್ಯೂಟಿಫುಲ್ ಮನಸುಗಳು', 'ಬೆಲ್ ಬಾಟಂ'ನಂಥ ಸದಭಿರುಚಿಯ ಹಿಟ್ ಸಿನಿಮಾಗಳನ್ನು ಕೊಟ್ಟಿರುವ ಅವರೀಗ ಸೋಲಿನ ಭೀತಿಯಲ್ಲಿದ್ದಾರೆ. ಆದರೆ ಈ ಸೋಲು ಅವರ ಸಿನಿಮಾಗೆ ಸಂಬಂಧಿಸಿದ್ದಲ್ಲ; ಇಡೀ ಚಿತ್ರರಂಗವೇ ಸೋಲುವ ಭೀತಿ. ಅದಕ್ಕೆ ಅವರು ಕೊಡುವ ಕಾರಣವೂ ಅಷ್ಟೇ ಸ್ಪಷ್ಟವಾಗಿದೆ.

'ಕೊನೆಗೂ ಸಿನಿಮಾರಂಗ ಎನ್ನುವುದು ಒಂದು ಕನಸಿನ ಕ್ಷೇತ್ರ. ಎಷ್ಟೋ ಜನ ತಮ್ಮ ಕನಸನ್ನು ನನಸಾಗಿಸಿಕೊಳ್ಳಲು ಇಲ್ಲಿಗೆ ಬರುತ್ತಾರೆ. ಇನ್ನಷ್ಟು ಜನ ಅಂಥದೊಂದು ಸುಂದರ ಕನಸಿನ ಭಾಗವಾಗುತ್ತಿದ್ದೇವೆ ಎಂಬ ಹೆಮ್ಮೆಯ ಕಾರಣಕ್ಕೆ ಇಲ್ಲಿ ಕೆಲಸ ಮಾಡುತ್ತಿರುತ್ತಾರೆ. ಒಬ್ಬ ಡ್ರೈವರ್‌ಗೆ ಇಲ್ಲಿ ಎಷ್ಟು ಸಂಬಳ ಸಿಗುತ್ತದೆಯೋ ಅದಕ್ಕಿಂತ ಹೆಚ್ಚು ಸಂಬಳ ಸಾಫ್ಟ್‌ವೇರ್ ಕಂಪನಿಗೆ ಕ್ಯಾಬ್ ಓಡಿಸಿದರೆ ಸಿಗುತ್ತೆ. ಆದರೂ ಅವನು ಯಾಕೆ ಇಲ್ಲಿಯೇ ಕೆಲಸ ಮಾಡುತ್ತಾನೆ? ಕಲೆಯ ಜೊತೆಗೆ ಬದುಕುತ್ತಿದ್ದೇನೆ ಎಂಬ ಹೆಮ್ಮೆಯೇ ಅವನನ್ನು ಇಲ್ಲಿ ಉಳಿಸಿಕೊಂಡಿರುತ್ತದೆ. ಆದರೆ ಎಲ್ಲ ಹೆಮ್ಮೆಗಿಂತ ಹಸಿವು ತೀವ್ರವಾದದ್ದಲ್ಲವೇ? ಹೊಟ್ಟೆಗೇ ಇಲ್ಲ ಎಂದಾಗ ಅನಿವಾರ್ಯವಾಗಿ ಅವನು ಇಲ್ಲಿಂದ ಹೊರಬಿದ್ದು ಯಾವುದೋ ಸಾಫ್ಟ್‌ವೇರ್ ಕಂಪನಿಗೆ ಕ್ಯಾಬ್ ಓಡಿಸಲು ಹೋಗುತ್ತಾನಷ್ಟೆ' ಎನ್ನುವ ಜಯತೀರ್ಥ ತಮ್ಮದೇ ಉದಾಹರಣೆಯೊಂದಿಗೆ ಸದ್ಯದ ಚಿತ್ರರಂಗದ ಬಿಕ್ಕಟ್ಟನ್ನು ವಿವರಿಸುತ್ತಾರೆ.

“ನಾನು 'ಬನಾರಸ್' ಸಿನಿಮಾ ಶುರುಮಾಡಿ ಮೂರು ವರ್ಷಗಳಾಗುತ್ತ ಬಂತು. ಈ ವರ್ಷ ಜನವರಿಯಲ್ಲಿ ಪ್ರಚಾರಕಾರ್ಯ ಆರಂಭಿಸಿ ಮೇ ತಿಂಗಳಲ್ಲಿ ಬಿಡುಗಡೆ ಮಾಡಬೇಕು ಎಂದು ನಿರ್ಧರಿಸಿದ್ದೆವು. ಮೇ ತಿಂಗಳಲ್ಲಿ ತುಂಬ ಸಿನಿಮಾಗಳಿರುತ್ತವೆ ಎಂಬ ಕಾರಣಕ್ಕೆ ಆಗಸ್ಟ್ ತಿಂಗಳಿಗೆ ಬಿಡುಗಡೆ ಮುಂದೂಡಿದೆವು. ಈಗ ನೋಡಿದರೆ ಕೊರೊನಾ ಮತ್ತೆ ತನ್ನ ಕೆನ್ನಾಲಿಗೆ ಚಾಚಿದೆ” ಎಂದು ಈಗಾಗಲೇ ಬಿಡುಗಡೆಗೆ ಸಜ್ಜಾಗಿರುವ ಸಿನಿಮಾ ಕುರಿತು ಹೇಳುವ ಅವರ ನಿರ್ದೇಶನದ ಇನ್ನೊಂದು ಸಿನಿಮಾದ ಪರಿಸ್ಥಿತಿ ಇನ್ನೂ ಬಿಕ್ಕಟ್ಟಿನಲ್ಲಿದೆ.

“ಈಗಾಗಲೇ 'ಬೆಲ್‌ಬಾಟಂ 2' ಸಿನಿಮಾ ಚಿತ್ರೀಕರಣ ಆರಂಭವಾಗಬೇಕಿತ್ತು. ಎಲ್ಲರೂ ಕಾಲ್ ಮಾಡಿ ಯಾವಾಗಿಂದ ಪ್ಲ್ಯಾನ್ ಮಾಡಿಕೊಂಡಿದ್ದೀರಿ ಶೂಟಿಂಗ್‌ಗೆ ಎಂದು ಕೇಳ್ತಾರೆ. ಸರ್ಕಾರ ಯಾವಾಗ ಲಾಕ್‌ಡೌನ್ ಮಾಡುತ್ತದೆ, ಯಾವಾಗ ಚಿತ್ರರಂಗದ ಕೆಲಸಗಳಿಗೆ ತಡೆ ಬೀಳುತ್ತದೆ ಗೊತ್ತಿಲ್ಲ. ಇಂಥ ಅಸ್ಥಿರ ಪರಿಸ್ಥಿತಿಯಲ್ಲಿ ಹೇಗೆ ಪ್ಲ್ಯಾನ್ ಮಾಡುವುದು? ಏನೆಂದು ಪ್ಲ್ಯಾನ್ ಮಾಡುವುದು?” ಎನ್ನುವ ಅವರಿಗೆ ಚಿತ್ರರಂಗದಲ್ಲಿ ಶೇ 50ರಷ್ಟು ಪ್ರೇಕ್ಷಕರಿಗೆ ಮಾತ್ರ ಅನುಮತಿ ನೀಡಿರುವುದರ ಕುರಿತು ಅಸಮಾಧಾನವಿದೆ. 'ಗಂಡ ಹೆಂಡತಿ ಮನೆಯಿಂದ ಒಟ್ಟಿಗೆ ಹೊರಡುತ್ತಾರೆ. ಸಿನಿಮಾ ಮುಗಿಸಿ ಹೋಟೆಲ್‌ನಲ್ಲಿ ಒಟ್ಟಿಗೆ ಕೂತು ಊಟ ಮಾಡುತ್ತಾರೆ. ಆದರೆ ಚಿತ್ರಮಂದಿರದಲ್ಲಿ ಮಾತ್ರ ಒಟ್ಟಿಗೆ ಕೂಡುವಂತಿಲ್ಲ ಅಂದರೆ ಇದ್ಯಾವ ನ್ಯಾಯ?' ಎನ್ನುವುದು ಅವರ ಪ್ರಶ್ನೆ.

ಸಿನಿಮಾದ ಸೋಲುಗೆಲುವನ್ನು ಬರೀ ಚಿತ್ರಮಂದಿರಗಳಿಗೆ ಬರುವ ಪ್ರೇಕ್ಷಕರಷ್ಟೇ ನಿರ್ಧರಿಸುತ್ತಾರೆ ಎನ್ನುವ ಕಾಲದಲ್ಲಿ ನಾವಿಲ್ಲ. ಒಂದು ಕಡಿಮೆ ಬಜೆಟ್ ಸಿನಿಮಾ ಸಿದ್ಧವಾಗಿ ಚಿತ್ರಮಂದಿರದಲ್ಲಿ ಬಿಡುಗಡೆಯಾಗಬೇಕು ಎಂದರೆ ಕನಿಷ್ಠ ಎರಡೂವರೆ ಕೋಟಿ ರೂಪಾಯಿ ನಿರ್ಮಾಪಕರ ಕೈಯಿಂದ ಜಾರುತ್ತವೆ. ಆದರೆ ಹೀಗೆ ಜಾರಿದ ನೋಟುಗಳು ಕಲಾವಿದರು ನಿರ್ದೇಶಕನಿಂದ ಹಿಡಿದು ವಾಹನ ಚಾಲಕನವರೆಗೆ ಸಾವಿರಾರು ಜನರ ಹೊಟ್ಟೆಗೆ ತುತ್ತನ್ನು ಉಣಿಸುತ್ತವೆ. ಹಾಗಾಗಿ ಒಂದು ಸಿನಿಮಾ ನಿಂತಿತು ಎಂದರೂ ನೂರಾರು ಜನರ ಬದುಕಿನ ಮೇಲೆ ಪರಿಣಾಮ ಬೀರುತ್ತದೆ.

## ಸಾಲದ ಗಾಳಕ್ಕೆ ಸಿಕ್ಕಿದವರು

'ಸಾಲ ತೆಗೆದುಕೊಂಡವನು ಸತ್ತ' ಎಂಬ ಮಾತು ಬೇರೆ ಕ್ಷೇತ್ರಗಳಿಗೆ ಎಷ್ಟು ಹೊಂದುತ್ತದೋ ಇಲ್ಲವೋ ಸಿನಿಮಾ ಕ್ಷೇತ್ರಕ್ಕಂತೂ ಹೇಳಿ ಮಾಡಿಸಿದಂತಿದೆ.



'ಸಲಗ' ಚಿತ್ರದಲ್ಲಿ ದುನಿಯಾ ವಿಜಯ್ ಮತ್ತು ಸಂಜನಾ ಆನಂದ್